# ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರೇಮ-ಕಾಮದ ರಾಯಬಾರ

**ಡಾ. ಟಿ.ಡಿ. ರಾಜಣ್ಣ ತಗ್ಗಿ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ
ವಿಶ್ವವಿದ್ಯಾಲಯ, ಕಲಬುರಗಿ

ಪ್ರೇಮವೆಂದರೆ ಅದೊಂದು ಸಂವೇದನೆ ಮತ್ತು ಸಾಮಾಜಿಕ ವಿದ್ಯಮಾನ ಎಂದು ಮನಃಶಾಸ್ತ್ರ ಹೇಳುತ್ತದೆ. ಈ ಪ್ರೇಮವನ್ನು ಒಲುಮೆ, ಪ್ರೀತಿ, ಅಕ್ಕರೆ, ಒಲವು, ಕಾದಲ್ ಹೀಗೆ ಹಲವಾರು ಪರ್ಯಾಯ ಪದಗಳಿಂದ ಹೆಸರಿಸಬಹುದು. ಆದರೆ ಪ್ರೇಮವೆಂದರೆ ಇದೇ ಎಂದು ನಿರ್ದಿಷ್ಟವಾದ ಪದಗಳಲ್ಲಿ ನಿಖರವಾಗಿ ಉತ್ತರಿಸಲಾಗದು, ಅರ್ಥೈಸಲೂ ಆಗದು. ಪ್ರೇಮ ಅನುಭವಕ್ಕೆ ದಕ್ಕುವುದೇ ಹೊರತು ಪದಕೋಶಗಳಲ್ಲಿ ಸಿಗುವಂಥದ್ದಲ್ಲ. ಪ್ರೇಮ ಎನ್ನುವುದು ತಾದಾತ್ಮ್ಯದಿಂದ ಕೂಡಿದ ಮಾನಸಿಕ ಅನುಭೂತಿ. ಅದೊಂದು ಭಾವನಾತ್ಮಕ ಪ್ರಕ್ರಿಯೆ. ಮೂಲಭೂತ ಬಯಕೆ. ಇಂದ್ರಿಯಾಪೇಕ್ಷೆ. ಅದು ಬಾಂಧವ್ಯಗಳ ಸಂವೇದನೆಯೂ ಕೂಡ. ಅದೊಂದು ಮೋಹ. ಅದೊಂದು ದಾಹ. ಅದೊಂದು ವಾಂಛೆ. ಅದೊಂದು ಸ್ವಾರ್ಥ. ಓರ್ವ ವ್ಯಕ್ತಿ ಇನ್ನೋರ್ವ(ವಿರುದ್ಧ ಲಿಂಗಿ) ವ್ಯಕ್ತಿಯೊಂದಿಗೆ ಹೊಂದಬಯಸುವ ಭಾವನಾತ್ಮಕ ಸಂಬಂಧ.

ಈ ಪ್ರೇಮಕ್ಕೆ ಬಹುಕಾಲದ ಆಯುಷ್ಯವಿಲ್ಲ, ಅದು ಶಾಶ್ವತವೂ ಅಲ್ಲ. ಈ ಪ್ರೇಮ, ಪ್ರೇಮವಾಗಿಯೇ ಮುಂದುವರೆದ ಉದಾಹರಣೆಗಳು ಸಿಗುವುದೂ ದುರ್ಲಭವೆ. ಈ ಪ್ರೇಮವು ಸಂಕೀರ್ಣವೂ ಹೌದು, ಅಮೂರ್ತ ಸ್ವರೂಪದ್ದೂ ಹೌದು. ಪ್ರೇಮವೆನ್ನುವುದು ಎರಡು ದೇಹಗಳ ಬೆತ್ತಲಾಗುವಿಕೆಯಲ್ಲ, ಅದು ಎರಡು ಮನಸ್ಸುಗಳ ಬೆತ್ತಲಾಗುವಿಕೆ ಎಂದು ವಿವರಿಸಬಹುದಾದರೂ ಈ ಪ್ರೇಮಕ್ಕೆ ಪ್ರಾಥಮಿಕ ಉದ್ದೇಶ ಮತ್ತು ಅಂತಿಮ ಉದ್ದೇಶ ಎಂಬ ಎರಡು ಉದ್ದೇಶಗಳಿವೆ. ಪ್ರಾಥಮಿಕ ಉದ್ದೇಶವು ಮನಸ್ಸುಗಳ ಮಿಲನದಲ್ಲಿ ಸಾಫಲ್ಯತೆಯನ್ನು ಕಂಡುಕೊಂಡರೆ, ಅಂತಿಮ ಉದ್ದೇಶವು ಶಾರೀರಿಕ ಮಿಲನದಲ್ಲಿ ಅಥವಾ ಪ್ರಣಯದಲ್ಲಿ ಕೊನೆಗೊಳ್ಳುತ್ತದೆ.

ಪ್ರೇಮವೆನ್ನುವುದು ಮನುಷ್ಯ ಜಗತ್ತಿನಲ್ಲಿ ಸದಾ ಚಾಲ್ತಿಯಲ್ಲಿರುವ ಒಂದು ಸಂವೇದನಾ ಪ್ರಕ್ರಿಯೆಯಾದರೂ ಈ ಪ್ರೇಮವು ಗಂಡು-ಹೆಣ್ಣುಗಳಾದ ಇಬ್ಬರು ನಿರ್ದಿಷ್ಟ ವ್ಯಕ್ತಿಗಳಲ್ಲಿ ಎಂದೂ ಪ್ರೇಮವಾಗಿಯೇ ಉಳಿಯುವುದಿಲ್ಲ. ಅದು ಬೇರೆ ಬೇರೆ ಸ್ವರೂಪಗಳಲ್ಲಿ ಕೊನೆಗೊಳ್ಳುತ್ತದೆ. ಪ್ರೇಮವು ಅದರ ಅಂತಿಮ ಉದ್ದೇಶವಾದ ಕಾಮದಲ್ಲಿ ಕೊನೆಗೊಂಡರೆ, ಕೆಲವೊಂದು ಸಲ ಈ ಪ್ರೇಮವು ವೈವಾಹಿಕ ಜೀವನಕ್ಕೆ ಕಾಲಿಡುವ ಮೂಲಕ ಕೊನೆಗೊಳ್ಳುತ್ತದೆ. ಅಂತೆಯೆ ಈ ಪ್ರೇಮ ಕೆಲವೊಮ್ಮೆ ದ್ವೇಷದ ಮೂಲಕವೂ, ಕೆಲವೊಮ್ಮೆ ಸಾವಿನ ಮೂಲಕವೂ ಕೊನೆಗೊಳ್ಳುತ್ತದೆ. ಹಾಗೆಯೆ ಈ ಪ್ರೇಮ ಸಾಫಲ್ಯತೆಯನ್ನು ಪಡೆಯದೆಯೂ ಕೊನೆಗೊಳ್ಳುತ್ತದೆ. ಹಾಗಾಗಿ ಪ್ರೇಮ ಎಂದೂ ಇಬ್ಬರು ವ್ಯಕ್ತಿಗಳ ನಡುವೆ ಬಹುಕಾಲ ಪ್ರೇಮವಾಗಿ ಉಳಿದಿರುವುದಿಲ್ಲ.

ಪ್ರೇಮದ ಅಂತಿಮ ಉದ್ದೇಶವಾದ ಶಾರೀರಿಕ ಮಿಲನವನ್ನು ಕಾಮವೆನ್ನಬಹುದು. ಈ ಕಾಮ ಮಾನಸಿಕ ಅನುಭೂತಿಯೊಂದಿಗಿನ ಭೌತಿಕ ಅಥವಾ ದೈಹಿಕ ಪ್ರಕ್ರಿಯೆ. ಇದು ಭಾವನೆಗಳೊಂದಿಗೆ ಬೆಸೆದಿರುವ ಲೈಂಗಿಕ ಬಯಕೆ. ವಿಷಯಲಾಲಸೆ, ಭೋಗಾಸಕ್ತಿ, ಮಿದುಳಿನಲ್ಲಿರುವ ರಾಸಾಯನಿಕಗಳನ್ನು ಬದಲಾಯಿಸುವ ಭಾವನೆಯೂ ಕೂಡ. ಪ್ರೇಮವು ಭಾವನಾತ್ಮಕ ಬಯಕೆಯನ್ನು ಆದರಿಸಿದರೆ, ಕಾಮವು ಲೈಂಗಿಕ ಆಕರ್ಷಣೆಯನ್ನು ಆದರಿಸಿದುದಾಗಿದೆ. 'ಅಪಾಯಕರ ಪ್ರಣಯ ಎಂದು ಗೊತ್ತಿದ್ದೂ ಮನುಷ್ಯರು ಪ್ರೇಮಿಸುತ್ತಾರೆ. ಅನೈತಿಕ ಎಂದು ಗೊತ್ತಿದ್ದೂ ಅದರ ಕಡೆ ಆಕರ್ಷಿತರಾಗುತ್ತಾರೆ' ಎಂದು ಡಿ.ಆರ್ ನಾಗರಾಜ್ ಅವರು ತಮ್ಮ 'ಸಾಹಿತ್ಯ ಕಥನ' (ಪು.೨೩೭)ದಲ್ಲಿ ಪ್ರೇಮ-ಕಾಮದ ಬಗ್ಗೆ ಹೇಳಿದ ಮಾತನ್ನು

ಗಮನಿಸಬೇಕು. ಅಂತೆಯೆ 'ಯಾರಾದರೂ ಇಬ್ಬರು ವ್ಯಕ್ತಿಗಳು ಪ್ರೇಮದಲ್ಲಿದ್ದಾರೆಂದರೆ ವಾಸ್ತವವಾಗಿ ಅವರು ಕಾಮಕ್ಕೆ ಹಾತೊರೆಯುತ್ತಿರುವವರೆಂದೇ ಅರ್ಥ' ಎಂದು ಎರಿಕಾ ಎಫ್. ಐಸಾಕ್ ಹೇಳಿರುವುದನ್ನು ಇಲ್ಲಿ ನೆನೆಯಬೇಕು.

ನೇಮಿಚಂದ್ರನು ತನ್ನ 'ಲೀಲಾವತಿ ಪ್ರಬಂಧ'ದಲ್ಲಿ ಈ ಕಾಮವನ್ನು ಶೃಂಗಾರವೆಂದು ತಿಳಿಸುತ್ತ, 'ಸ್ತ್ರೀರೂಪಮೇ ರೂಪಂ ಶೃಂಗಾರಮೇ ರಸಂ ಅತುಳ ಸುರತಗಂಧಮೇ ಗಂಧಂ' ಎಂದು ಹೇಳಿ, ಮುಂದುವರೆದು 'ಕಾಮಾಗಮಮೇ ಪರಮಾಗಮಂ, ಪ್ರೇಯಸಿ ಪ್ರಸಾದ ಪ್ರಣಾಮಮೆ ಪ್ರಣಾಮಂ, ಸಂಭೋಗಮೇ ಭೋಗಂ, ಸುರತ ಸುಖಮೇ ಸುಖಂ, ವಿರಹ ದುಃಖಮೇ ದುಃಖಂ' (ಲೀ.ಪ್ರ. ೧೨ನೇ ಆಶ್ವಾಸ ಪದ್ಯ ೮, ಪು. ೨೫೮) ಎಂದಿದ್ದಾನೆ. ಅಂದರೆ ಇಲ್ಲಿನ ಶೃಂಗಾರ ಮತ್ತು ಸುರತವೆನ್ನುವುದು ಪ್ರಣಯ ಅಥವಾ ಕಾಮಕ್ಕೆ ಇರುವ ಪರ್ಯಾಯ ಪದಗಳೆನ್ನುವುದನ್ನು ಮರೆಯಬಾರದು. ಇಲ್ಲಿ ನೇಮಿಚಂದ್ರನು ಕಾಮವೇ ಪರಮ ಆಗಮವೆಂದೂ, ಸಂಭೋಗವೇ ಭೋಗದಲ್ಲಿ ಅತ್ಯಂತ ಶ್ರೇಷ್ಠವೆಂದು, ಸುರತ ಸುಖವೇ ಸುಖವೆಂದು ಹೇಳಿರುವುದನ್ನು ಗಮನಿಸಬೇಕು.

ಪ್ರೇಮ ಮತ್ತು ಕಾಮ ಮನುಷ್ಯನ ಬದುಕಿನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವು ಒಂದಕ್ಕೊಂದು ಪೂರಕವಾಗಿದ್ದುಕೊಂಡು ಬೇರ್ಪಡಿಸಲಾಗದ ಅವಿನಾಭಾವ ಸಂಬಂಧವನ್ನು ಹೊಂದಿರುವಂಥವು. ಇವು ಪರಸ್ಪರರಿಂದ ಸಮರ್ಪಣಾ ಭಾವವನ್ನು ಬೇಡುತ್ತವೆ. ಪ್ರೇಮ ಅಥವಾ ಕಾಮವೆನ್ನುವುದು ಗಂಡಿನಲ್ಲೊ ಅಥವಾ ಹೆಣ್ಣಿನಲ್ಲೊ ಹುಟ್ಟಿದರೆ ಅದು ಕೇವಲ ಒಮ್ಮುಖವಾದುದಾಗಿರುತ್ತದೆ. ಆ ಕ್ಷಣದಲ್ಲಿ ಅದು ಪ್ರೇಮವೂ ಆಗಿರುವುದಿಲ್ಲ. ಕಾಮವೂ ಆಗಿರುವುದಿಲ್ಲ. ಈ ಪ್ರೇಮ ಅಥವಾ ಕಾಮವು ಇಬ್ಬರು ವ್ಯಕ್ತಿಗಳ ನಡುವೆ ಭಾವನಾತ್ಮಕವಾಗಿ ಮತ್ತು ಶಾರೀರಿಕವಾಗಿ ಬೆಸೆದುಕೊಳ್ಳಬೇಕಾದರೆ ಕೆಲವೊಮ್ಮೆ ಯಾರದಾದರೂ ಮಧ್ಯಸ್ಥಿಕೆಯನ್ನು ಬೇಡುತ್ತದೆ. ಈ ಮಧ್ಯಸ್ಥಿಕೆಯ ಸಹಾಯವನ್ನು ನಾನು ರಾಯಬಾರ ಎಂದು ಕರೆಯಲು ಇಚ್ಛಿಸುತ್ತೇನೆ. ಪ್ರೇಮವಾಗಲಿ ಅಥವಾ ಕಾಮವಾಗಲಿ ಯಾರಲ್ಲಿ ತೀವ್ರತರವಾಗಿರುತ್ತದೆಯೊ ಅವರು ಈ ರೀತಿಯ ರಾಯಬಾರದ ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುವುದುಂಟು. ಇಂಥ ರಾಯಬಾರವು ಪರಿಸ್ಥಿತಿಯನ್ನು ಆಧರಿಸಿ ಕೆಲವೊಮ್ಮೆ ಸ್ವ-ಇಚ್ಛೆಯಿಂದ ನಡೆಯುವುದಾಗಿದ್ದರೆ, ಕೆಲವೊಮ್ಮೆ ಬೇಡಿಕೆಯ ಮೂಲಕವೂ, ಕೆಲವೊಮ್ಮೆ ಆದೇಶದ ಮೂಲಕವೂ, ಕೆಲವೊಮ್ಮೆ ಆಮಿಷದ ಮೂಲಕವೂ, ಅನುಕಂಪ-ಅನಿವಾರ್ಯತೆಯಿಂದಲೂ ನಡೆಯುವುದಾಗಿದೆ. ಈ ರಾಯಬಾರದ ಹಿಂದೆ ಒಮ್ಮೊಮ್ಮೆ ಸ್ವಾರ್ಥವೂ, ಕೆಲವೊಮ್ಮೆ ಕಾಳಜಿಯೂ, ಕೆಲವೊಮ್ಮೆ ತ್ಯಾಗವೂ ಇರುವುದನ್ನು ಕಾಣಬಹುದು. ಏನೇ ಆದರೂ ಈ ರಾಯಬಾರದ ಸಹಾಯದಿಂದಲೇ ಅನೇಕ ಪ್ರೇಮಗಳು ಸಫಲಗೊಂಡಿರುವುದನ್ನು ಅಂತೆಯೆ ವಿಫಲಗೊಂಡಿರುವುದನ್ನೂ ಕಾಣಬಹುದು. ಅದರಂತೆಯೆ ಕಾಮವೂ ಕೂಡ. ಇಂತಹ ರಾಯಬಾರಗಳ ಮೂಲಕ ಉಂಟಾದ ಅನೇಕ ಪ್ರೇಮ-ಕಾಮದ ಸಂಗತಿಗಳು ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ಇಲ್ಲಿ ಪ್ರಾಚೀನ ಸಾಹಿತ್ಯದಲ್ಲಿನ ಕೆಲವು ಪ್ರಮುಖವಾದ ರಾಯಬಾರಗಳನ್ನು ಮಾತ್ರ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಕನ್ನಡದ ಮೊದಲ ಗದ್ಯಕೃತಿಯೆನಿಸಿದ ವಡ್ಡಾರಾಧನೆಯ 'ಗಜಕುಮಾರನ ಕತೆ'ಯಲ್ಲಿ ವಿಷ್ಣು ಅರ್ಧಚಕ್ರವರ್ತಿ ಎಂಬ ಅರಸನು 'ಪೌದನಪುರಾಧಿಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿಡಿದುಕೊಂಡು ಬರ್ಕ್ಕುಂಮಾತಂಗಾತನು ಬೇಡಿದುದೆಲ್ಲಮಂ ಕುಡುವೆನೆಂದು'(ವಡ್ಡಾರಾಧನೆ, ಪುಟ ೪೧) ಹೊರಡಿಸಿದ ಘೋಷಣೆಯನ್ನು ಕೇಳಿದ ಗಜಕುಮಾರನು ಅದರಂತೆ ಅಪರಾಜಿತನನನ್ನು ಸೋಲಿಸಿ ಹಿಡಿದು ತರುತ್ತಾನೆ. ಅದರಿಂದ ತೃಪ್ತನಾದ ವಿಷ್ಣು ಅರಸನು 'ಮೆಚ್ಚಿದುದಂ ಬೇಡಿಕೊಳ್ಳೆಂದೊಡೆ' ಗಜಕುಮಾರನು, 'ನಿಮ್ಮಂತಃಪುರಮನುೞಿಯೆ ಪೊಳಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಛೆಯೊಳೆ ಮೆಚ್ಚಿದಂತೆ ಬಾೞ್ವೆನೀದಾಯಮಂ ಬೇಡಿದೆನ್' (ವಡ್ಡಾರಾಧನೆ, ಪುಟ ೪೧-೪೨) ಎಂಬ ಬೇಡಿಕೆಯಿಡುತ್ತಾನೆ. ಇದು ತಾನು ಮುಂದೆ ಹೊಂದಲಿಚ್ಛಿಸಿದ ಕಾಮದ ಸಂಬಂಧಕ್ಕೆ ರಾಜನೇ ರಾಯಬಾರದ ರೀತಿಯಲ್ಲಿ

ಬೆಂಬಲಕ್ಕೆ ಬರಬೇಕೆಂದು ಬೇಡಿದ ಕೋರಿಕೆಯಾಗಿ ಕಾಣಿಸುತ್ತದೆ. ಮುಂದೆ ಈ ರಾಜನ ಅಧಿಕಾರದ ಅನುಮತಿಯೊಂದಿಗೆ ತನ್ನ ಕಾಮಸಂಬಂಧವನ್ನು ಆ ನಾಡಿನ ಹೆಣ್ಣುಗಳೊಂದಿಗೆ ನಡೆಸುವುದು ಕೂಡ ರಾಜನ ಈ ರಾಯಬಾರದ ನೆರವಿನೊಂದಿಗೆ ಎಂಬುದು ಗಮನಾರ್ಹ. ಈ ರಾಯಬಾರವು ಪ್ರಭುತ್ವದ ಅಧಿಕಾರಶಾಹಿ ನೆಲೆಯಲ್ಲಿ ನಡೆಯುವುದಾಗಿ ಕಾಣಿಸುತ್ತದೆ.

'ಕಾರ್ತೀಕ ಋಷಿಯ ಕತೆ'ಯಲ್ಲಿ ಕಂಡುಬರುವ 'ಕಿಱಿಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಂ ಗಾಡಿಯುಮಂ ಕಂಡಾಕೆಗಾಟಿಸಿ' ಎಂಬ ಮಾತುಗಳಲ್ಲಿ ಅಗ್ನಿರಾಜನೆಂಬ ಅರಸನು ತನ್ನ ಮಗಳ ಮೇಲೆಯೇ ಮೋಹಗೊಂಡಿರುವುದು ಕಂಡುಬರುತ್ತದೆ. ಇಲ್ಲಿನ ಮಗಳ ಮೇಲಿನ ವ್ಯಾಮೋಹವು ಮೂಲಭೂತವಾಗಿ ಪ್ರೇಮ ಮತ್ತು ಕಾಮದ ನಡುವಿನ ವಿಚಿತ್ರ ಹಂತವಾಗಿದೆ. ರಾಜನು ಆಕೆಯನ್ನು ಪಡೆಯುವುದಕ್ಕಾಗಿ ಉಪಾಯದ ಮೂಲಕ ತನ್ನ ಆಸ್ಥಾನದ ಅಧಿಕಾರಿಗಳನ್ನು ಮತ್ತು ನಾಡಿನ ಪ್ರಜೆಗಳನ್ನು ರಾಯಬಾರಿಗಳನ್ನಾಗಿ ಮಾಡಿಕೊಳ್ಳುವ ಸಂಚೊಂದು ರೂಪಿಸುವುದು ಕಂಡುಬರುತ್ತದೆ. ಈ ಎಲ್ಲ ಅಧಿಕಾರಿ ಮತ್ತು ಪ್ರಜೆಗಳ ಎದುರು, 'ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗಕ್ಕುಂ' (ವಡ್ಡಾರಾಧನೆ, ಪುಟ ೯೩) ಎಂದು ಕೇಳುವ ಪ್ರಶ್ನೆಯಲ್ಲಿ ತನ್ನ ಕಾಮದ ದಾಹವನ್ನು ಅವರೆಲ್ಲರ ಒಪ್ಪಿಗೆಯ ಮೂಲಕ ಈಡೇರಿಸಿಕೊಳ್ಳುವ ಬಯಕೆಯಿರುವುದನ್ನು ಕಾಣಬಹುದು. ಇಲ್ಲಿನ ಪ್ರಜೆಗಳು ಮತ್ತು ಅಧಿಕಾರಿಗಳು ರಾಜ ಒಡ್ಡಿದ ಬಲೆಯಲ್ಲಿ ಅಜ್ಞಾನಿಗಳ ಹಾಗೆ ಸಿಲುಕಿ, 'ಒಳ್ಳಿತ್ತಪ್ಪ ಆನೆ ಕುದುರೆ ಮುತ್ತು ಮಾಣಿಕಮುಂ ಸ್ತ್ರೀರತ್ನಮುಂ ಪೃಥ್ವಿಯಾಳ್ವೊಂಗಕ್ಕುಂ (ವಡ್ಡಾರಾಧನೆ, ಪುಟ ೯೩) ಎಲ್ಲವೂ ರಾಜನಿಗೇ ಸೇರಬೇಕೆಂದು ಒಮ್ಮತವಾಗಿ ಅನಿವಾರ್ಯದ ಸಮ್ಮತದ ಮುದ್ರೆಹಾಕುವುದು ಕಂಡುಬಂದರೂ ಆ ಪ್ರಜೆಗಳಲ್ಲಿ ರಾಜನ ಈ ಕೋರಿಕೆಗೆ ತಮ್ಮ ಸಮ್ಮತಿಯಿಲ್ಲದಿದ್ದರೂ ಪ್ರಭುತ್ವಕ್ಕೆ ಹೆದರಿ, ಈ ಸಂಬಂಧಕ್ಕೆ ಅನ್ಯಾಯದ ಅಸಹಾಯಕ ರಾಯಬಾರಿಗಳಾಗಿ ಕಾರ್ಯ ನಿರ್ವಹಿಸಿದವರಾಗಿ ಕಾಣುತ್ತಾರೆ.

ಇನ್ನು ಪಂಪನ 'ವಿಕ್ರಮಾರ್ಜುನ ವಿಜಯ' ಶುರುವಾಗುವುದೇ ಈ ರೀತಿಯ ಪ್ರೇಮ ರಾಯಬಾರದ ಸಂಗತಿಯಿಂದ ಎಂದರೆ ತಪ್ಪಾಗಲಾರದು. ಕುರುವಂಶದ ಮೊದಲ ಪ್ರಧಾನ ವ್ಯಕ್ತಿಯಾದ ಶಂತನು ಒಮ್ಮೆ ವಿನೋದಕ್ಕೋಸ್ಕರ ಬೇಟೆಗೆ ಹೋಗಿದ್ದಾಗ ಅಲ್ಲಿ ಯೋಜನಗಂಧಿಯಾದ ಸತ್ಯವತಿಯ ಮೇಲೆ ಮೋಹಗೊಳ್ಳುವುದು ಶಂತನುವಿನ ಮನದೊಳಗೆ ಹುಟ್ಟಿದ ಪ್ರೇಮವಾದರೂ ಅದು ಕಾಮದ ಬಯಕೆಯೂ ಹೌದು. ಆದರೆ ಅದು ಸಫಲಗೊಳ್ಳುವುದು ಮಾತ್ರ ಶಂತನುವಿನ ಮಗನಾದ ಭೀಷ್ಮನು ವಹಿಸಿದ ರಾಯಬಾರದ ಮೂಲಕ ಎಂಬುದನ್ನು ಗಮನಿಸಬೇಕು.

'ಮೃಗಯಾವ್ಯಾಜದಿನೊರ್ಮೆ ಶಂತನು ತೊಲಲ್ತರ್ಪಂ ಪಳಂಚಲ್ಕೆ ತ

ನ್ಮೃಗಶಾಬಾಕ್ಷಿ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು ಕಂಡೊಲ್ದು ನ

ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀನ್ ಬಾ ಪೋಪಮೆಂದಂಗೆ ಮೆ

ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ' (ಪಂ.ಭಾ. ೧-೭೦, ಪುಟ ೮೮)

ಶಂತನು ಸತ್ಯವತಿಯ ಮೈಯ ಸುಗಂಧಕ್ಕೆ ಸೋತು, ಒಲಿದು, ದುಂಬಿಯಂತೆ ಅವಳಲ್ಲಿ ಅನುರಕ್ತನಾಗುವುದು ಮತ್ತು ದಿವ್ಯವನ್ನು ಹಿಡಿಯುವ ರೀತಿಯಲ್ಲಿ ಅವಳ ಕೈಯನ್ನು ಹಿಡಿದುಕೊಂಡು ಕರೆಯುವುದು ಅದು ಅನರ್ಥಗಳನ್ನು ಮೀರಿದ ಪ್ರೇಮಾನುಭೂತಿ. ಇಲ್ಲಿ ಕೈ ಹಿಡಿಯುವುದು ಎಂಬುದಕ್ಕೆ ಬೇರೆ ಅರ್ಥಗಳಿದ್ದರೂ ಇಲ್ಲಿನ ಕೈ ಹಿಡಿಯುವಿಕೆಯು ಪಾಣಿಗ್ರಹಣ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಏಕೆಂದರೆ ಒಬ್ಬ ಗಂಡು ಮದುವೆಯಾಗದ ಹೆಣ್ಣಿನ ಕೈ ಹಿಡಿಯುವುದು ಎಂದರೆ ಅದು ಪಾಣಿಗ್ರಹಣ ಮಾಡಿದಂತೆಯೆ ಸರಿ. ಇದಕ್ಕೆ ಪೂರಕ ಉದಾಹರಣೆಯೆಂದರೆ ಮರಾಠಿಯ ಶ್ರೇಷ್ಠ ಕಾದಂಬರಿಯಾದ ಯಯಾತಿಯಲ್ಲಿ ದೇವಯಾನಿಯ ಸೌಂದರ್ಯಕ್ಕೆ ಅಸೂಯೆಗೊಂಡ ರಾಜಕುಮಾರಿ ಶರ್ಮಿಷ್ಠೆಯು ದೇವಯಾನಿಯನ್ನು

ಬಾವಿಗೆ ತಳ್ಳುತ್ತಾಳೆ. ಆಗ ಅದೇ ದಾರಿಯಲ್ಲಿ ಬರುತ್ತಿದ್ದ ಯಯಾತಿಯು ಅವಳ ಕೈಹಿಡಿದು ಬಾವಿಯಿಂದ ಮೇಲೆತ್ತುವುದನ್ನು ಪಾಣಿಗ್ರಹಣವೆಂದೇ ಭಾವಿಸಿ ದೇವಯಾನಿಯನ್ನು ಮದುವೆಯಾದ ನಿದರ್ಶನವಿದೆ. ಇಲ್ಲಿಯೂ ಸಹ ಶಂತನು ಸತ್ಯವತಿಯ ಕೈಯನ್ನು 'ಪಿಡಿದು ನೀನ್ ಬಾ ಪೋಪಂ' ಎಂಬ ಮಾತಿನಲ್ಲಿ ವೈವಾಹಿಕ ಜೀವನಕ್ಕೆ ನೀಡುತ್ತಿರುವ ಆಹ್ವಾನವಿದೆ ಎಂದು ಎಷ್ಟೇ ಅರ್ಥೈಸಿದರೂ ಅದರ ಹಿಂದೆ ಪ್ರೇಮವೂ ಇದೆ, ಅದರೊಂದಿಗೆ ಕಾಮದ ತೀವ್ರತೆಯೂ ಇದೆ ಎಂಬುದನ್ನು ಗ್ರಹಿಸಬೇಕು. ಸತ್ಯವತಿಯು ಶಂತನುವಿನ ಪ್ರೇಮಕ್ಕೆ ಸೋತಳೆಂಬುದು ಅವಳ ನಾಚಿಕೆಯಲ್ಲಿ ವ್ಯಕ್ತವಾದರೂ 'ತತ್ಕನ್ಯಕೆ ನಾಣ್ಚಿ ಬೇಡುವೊಡೆ ಎಮ್ಮಯ್ಯನಂ ಬೇಡಿರೆ' ಎಂಬ ಮಾತುಗಳಲ್ಲಿ ಅದಕ್ಕೆ ಅಪ್ಪನ ಅನುಮತಿ ಬೇಕಿದೆ ಎಂಬ ಆಶಯವೂ ಕಂಡುಬರುತ್ತದೆ.

ಅದಕ್ಕೆ ಶಂತನು ಸ್ವತಃ ತಾನೇ ದಾಶರಾಜನಲ್ಲಿಗೆ ಹೋಗಿ ಸತ್ಯವತಿಯನ್ನು ಬೇಡಿದಾಗ ಶಂತನುವಿಗೆ ಭೀಷ್ಮನೆಂಬ ಮಗನಿರುವ ಕಾರಣ ಆ ಸಂಬಂಧ ಏರ್ಪಡುವುದಿಲ್ಲ. ಆದರೆ ದಿನಕಳೆದಂತೆ ಆ ಪ್ರೇಮದ ವಿರಹದಲ್ಲಿಯೇ ಕೊರಗುತ್ತಿದ್ದ ತನ್ನ ತಂದೆಯ ಮನದ ವೃತ್ತಾಂತವನ್ನು ಅರ್ಥಮಾಡಿಕೊಂಡ ಭೀಷ್ಮನು, ತನ್ನ ತಂದೆಯು ಈ ಕಾಮ ವಿರಹದಿಂದ ಸತ್ತರೆ ಆ ಪಾಪ ತನಗೆ ತಟ್ಟುತ್ತದೆ ಎಂದು ಭಾವಿಸಿ ನೇರವಾಗಿ ದಾಶರಾಜನ ಮನೆಗೆ ಹೋಗಿ,

'ನೀಡಿರದೀವುದೀ ನಿಜ ತನೂಜೆಯನೀ ವಧುಗಾದ ಪುತ್ರರೊಳ್

ಕೂಡುಗೆ ರಾಜ್ಯಲಕ್ಷ್ಮಿಂ◌್ಮ ಮೊಟೆಯಲ್ತೆನಗಂತದು ಪೆಂಡಿರೆಂಬರೊಳ್

ಕೂಡುವನಲ್ಲೆನಿಂದು ಮೊದಲಾಗಿರೆ ನಿಕ್ಕುವಮೆಂದು ರಾಗದಿಂ

ಕೂಡಿದನುಯ್ದು ಸತ್ಯವತಿಯಂ ಸತಿಯಂ ಪತಿಯೊಳ್ ನದೀಸುತಂ' (ಪಂ. ಭಾ. ೧-೭೩ ಪುಟ ೮೬)

ಎಂದು ತನ್ನ ಪ್ರತಿಜ್ಞೆಯನ್ನು ಅರುಹಿದರೂ ಹೋಗಿದ್ದು ಮಾತ್ರ ತಾನೊಬ್ಬ ಸ್ವ-ಇಚ್ಛೆಯ ರಾಯಬಾರಿಯಾಗಿ ಎಂಬುದೂ ಇಲ್ಲಿ ಮುಖ್ಯವಾಗುತ್ತದೆ. ಭೀಷ್ಮನು ಪ್ರತಿಜ್ಞೆಯ ಮೂಲಕ ತನ್ನ ತಂದೆಯ ಪ್ರೇಮವನ್ನು ಮತ್ತು ಆಸೆಯನ್ನು ಈಡೇರಿಸುವಲ್ಲಿ ಸಫಲನಾಗುವುದು ರಾಯಬಾರದ ಮೂಲಕ ಎಂಬುದು ಮುಖ್ಯ.

ಇಲ್ಲಿ ಪ್ರೇಮಕ್ಕೆ ಸಂಬಂಧಿಸಿದಂತೆ ಮತ್ತೊಂದು ವಿಚಾರವೆಂದರೆ ಸತ್ಯವತಿಯ ಮೇಲೆ ಶಂತನು ಮೋಹಗೊಳ್ಳುವುದು ಅವಳ ಮೈಯಿಂದ ಹೊರಡುತ್ತಿದ್ದ ಸುವಾಸನೆಯಿಂದ ಎಂಬುದು. ಇದೇ ರೀತಿ ಜನ್ನನ ಯಶೋಧರ ಚರಿತೆಯಲ್ಲಿಯೂ ಕೂಡ ಅಮೃತಮತಿಯು ತನ್ನ ಪ್ರೇಮವನ್ನು ಪ್ರಕಟಪಡಿಸುವುದು ತಾನು ಕೇಳಿಸಿಕೊಂಡ ಹಾಡಿನ ನುಣ್ದನಿಯಿಂದ. ಹೀಗೆ ಅನೇಕ ಸಂದರ್ಭಗಳು, ಸನ್ನಿವೇಶಗಳು ಪ್ರೇಮದ ಅಂಕುರಕ್ಕೆ ಕಾರಣಗಳಾದರೂ ಅವುಗಳು ಸಫಲತೆಯನ್ನು ಪಡೆಯುವುದು ಮಾತ್ರ ಇಂಥ ರಾಯಬಾರಗಳಿಂದ ಎಂಬುದನ್ನು ಮರೆಯುವಂತಿಲ್ಲ.

ನಾಗವರ್ಮನ 'ಕರ್ನಾಟಕ ಕಾದಂಬರಿ'ಯಲ್ಲಿ ಕಂಡುಬರುವ ಪುಂಡರೀಕ ಮತ್ತು ಮಹಾಶ್ವೇತೆಯ ಪ್ರೇಮ ಪ್ರಸಂಗದಲ್ಲಿಯೂ ಕೂಡ ಅವರ ನಡುವೆ ಉಂಟಾದ ಆಕಸ್ಮಿಕ ಪ್ರೇಮಕ್ಕೆ ಪುಂಡರೀಕನ ಗೆಳೆಯನಾದ ಕಪಿಂಜಲನು ರಾಯಬಾರಿಯಾಗಿ ಹೋಗುವುದನ್ನು ಗಮನಿಸಬಹುದು. ಇದು ಕೂಡ ಸ್ವ-ಇಚ್ಛೆಯಿಂದ ರಾಯಬಾರಕ್ಕೆ ಹೋದುದಾಗಿದೆ.

ಋಷಿಕುಮಾರರಾದ ಪುಂಡರೀಕ ಮತ್ತು ಕಪಿಂಜಲ ಇವರಿಬ್ಬರೂ ಒಮ್ಮೆ ಪೂಜೆಗೆಂದು ಹೊಸ ಹೂವನ್ನು ಕೊಯ್ದು ತೆಗೆದುಕೊಂಡು ಬರುತ್ತಿರುವಾಗ ಎದುರಾದ ಮಹಾಶ್ವೇತೆಯು ಪುಂಡರೀಕನನ್ನು ನೋಡಿ ಮೋಹಗೊಳ್ಳುವುದು ಮತ್ತು ಅವನ ಕೈಯಲ್ಲಿದ್ದ ಅಪೂರ್ವವಾದ ಕುಸುಮ ಮಂಜರಿಯನ್ನು ಕಂಡು ಅದರ ಬಗ್ಗೆ ತಿಳಿದುಕೊಳ್ಳುವ ಆಸೆ ವ್ಯಕ್ತಪಡಿಸುವುದು ನಡೆಯುತ್ತದೆ.

'ಎಳಸುತ್ತಿರ್ದಪೆ ಪುಷ್ಪಮಂಜರಿಗೆ ಕೊಳ್ಳೀ ಸುತ್ತಿದೇಕೆಂದು ಸಂ

ಚಳಿಸುತ್ತುಂ ನಿಜಕರ್ಣದಿಂ ತೆಗೆದು ಸೋಲ್ತಂ ಕೂಡು ನೀನೆನ್ನೊಳಂ

ದಳಿಮಾಲಾರವದಿಂದೆ ಪೇಳ್ವ ತೆರದಿಂ ಮತ್ಕರ್ಣದೊಳ್ ತಾರಕೋ

ಜ್ವಲಮಂ ರಂಜಿಪ ಪುಷ್ಪಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ' (ಕ.ಕಾ., ಮ.ವೃ. ೧೭, ಪುಟ ೪೧)

ಪುಂಡರೀಕನು ಮಹಾಶ್ವೇತೆಗೆ ಅದರ ವೃತ್ತಾಂತವನ್ನು ತಿಳಿಸಿ, ನಂತರ ಈಕೆಯು ಈ ಕುಸುಮಕ್ಕೆ ಆಸೆಪಟ್ಟಿದ್ದಾಳೆಂದು ಅರಿತು ಪುಂಡರೀಕನು 'ನಾನು ನಿನ್ನಲ್ಲಿ ಅನುರಕ್ತನಾಗಿದ್ದೇನೆ. ನನಗೆ ರತಿಸುಖವನ್ನು ನೀಡು' ಎಂಬAತೆ ಅವಳ ಕಿವಿಗೆ ಆ ಕುಸುಮ ಮಂಜರಿಯನ್ನು ತಾನೇ ತೊಡಿಸುತ್ತಾನೆ. ಆಗ ಅವಳ ಕಿವಿಯ ಸೋಂಕು ಅವನೊಳಗೆ ಪ್ರೇಮ ಮತ್ತು ಕಾಮದ ಭಾವವನ್ನು ಉಂಟುಮಾಡುತ್ತದೆ. ಅದೇ ರೀತಿಯಾದ ಭಾವವು ಮಹಾಶ್ವೇತೆಯಲ್ಲೂ ಉಂಟಾಗುತ್ತದೆ. ಆದರೆ ಇಬ್ಬರೂ ತಮ್ಮಲ್ಲಿ ಉಂಟಾದ ಆ ಪ್ರೇಮಭಾವವನ್ನು ಪರಸ್ಪರರು ವ್ಯಕ್ತಪಡಿಸುವುದಿಲ್ಲ. ಅದನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ತಮ್ಮ ತಮ್ಮ ನಿವಾಸಗಳಲ್ಲಿ ಅದರ ಅನುಭೂತಿಯನ್ನು ಹೊಂದುತ್ತಾರೆ. ಆದರೆ ಪುಂಡರೀಕನಿಗೆ ಮಹಾಶ್ವೇತೆಯ ಮೇಲಿನ ಪ್ರೇಮವು ವಿರಹಜ್ವರವಾಗಿ ಕಾಡಲು ಪ್ರಾರಂಭಿಸಿದಾಗ ಪುಂಡರೀಕನ ಕಾಮಜ್ವರದ ಪರಿಸ್ಥಿತಿಯನ್ನು ಅರಿತ ಕಪಿಂಜಲನು ಗೆಳೆಯನ ಪ್ರಾಣ ಕಾಪಾಡಿಕೊಳ್ಳುವ ಸಲುವಾಗಿ ಪ್ರೇಮವ್ಯವಹಾರಕ್ಕೆ ರಾಯಬಾರತ್ವವನ್ನು ವಹಿಸಿಕೊಂಡು ತಾನೇ ಮಹಾಶ್ವೇತೆಯ ಬಳಿಗೆ ಬರುವುದನ್ನು ಕಾಣಬಹುದು.

ಮಹಾಶ್ವೇತೆಯ ಬಳಿಗೆ ರಾಯಬಾರಕ್ಕಾಗಿ ಬಂದ ಕಪಿಂಜಲನು ಮೊದಲು ತಾನೊಬ್ಬ ಋಷಿ ಎಂಬುದನ್ನು ನೆನಪಿಸಿಕೊಂಡು, ತಾನು ಈ ಮಾತನ್ನು ಹೇಳಬಹುದೊ ಇಲ್ಲವೊ ಎಂಬ ಕಳವಳದಿಂದಲೇ ಹೇಳಲುದ್ಯುಕ್ತನಾಗುತ್ತಾನೆ. 'ಕಾಮಾತುರರ ತುಚ್ಛವಾದ ವ್ಯವಹಾರಕ್ಕೆ ಸಹಾಯ ಮಾಡಲು ಬಂದಿದ್ದೇನೆ. ಇದು ಈ ತಪಸ್ವಿಗೆ ಮತ್ತು ಉಟ್ಟಿರುವ ನಾರುಡೆಗೆ ಯೋಗ್ಯವಾದುದಲ್ಲ. ಆದರೂ ಬಂದಿರುವೆ' ಎಂದು ಹೇಳಿ ಮತ್ತೆ,

'ಏಕಾಂತದೊಳೀ ಲೇಖಮ

ನಾಕೆಗೆ ಪೋಗಿ ಕುಡುವುದೆಂದಟ್ಟಿದನ್...' (ಕ.ಕಾ. ಮ.ವೃ, ೩೭, ಪುಟ ೪೫)

ಎಂಬ ಮಾತಿನಲ್ಲಿ ಅವನು ಗೆಳೆಯನ ಬೇಡಿಕೆಯ ಮೇರೆಗೆ ಪ್ರೇಮವ್ಯವಹಾರಕ್ಕೆ ರಾಯಬಾರಿಯಾಗಿ ಬಂದಿರುವುದು ಗೊತ್ತಾಗುತ್ತದೆ. ಅಲ್ಲದೆ ಆ ಕಪಿಂಜಲನು ವಿರಹದ ಕಾಮಜ್ವರದಲ್ಲಿ ಬೇಯುತ್ತಿರುವ ತನ್ನ ಗೆಳೆಯನ ಪ್ರಾಣ ಉಳಿಸುವ ಸಲುವಾಗಿ, '...ಎಂತಾದೊಡಮೆನ್ನ ಕೆಳೆಯನಸುವಂ ಪಿಡಿವುದು ಸೆರಗೊಡ್ಡಿ ಬೇಡಿದೆಂ ಮೃಗನಯನೇ' (ಕ.ಕಾ. ಮ.ವೃ, ೭೩, ಪುಟ ೫೨) ಎಂದು ಬಗೆಬಗೆಯಾಗಿ ಬೇಡಿಕೊಳ್ಳುತ್ತಾನೆ. ಈ ರೀತಿ ಬೇಡಿಕೊಳ್ಳುವಲ್ಲಿ ಗೆಳೆಯನ ಪ್ರಾಣ ಮುಖ್ಯವಾದರೂ ಆ ಪ್ರಾಣ ಉಳಿಯುವುದು ಮಾತ್ರ ಮಹಾಶ್ವೇತೆಯ ಪ್ರೇಮ ಸಮ್ಮತಿಯಿಂದ ಎಂಬುದು ಅವನಿಗೆ ಗೊತ್ತಿದೆ. ಹಾಗಾಗಿ ಈ ಸಮ್ಮತಿಯನ್ನು ಪಡೆಯಲು ಮತ್ತು ಆಕೆಯನ್ನು ಕರೆದುಕೊಂಡು ಹೋಗಲು ಬಂದಿರುವ ಕಪಿಂಜಲನದು ನಿಜವಾದ ಗೆಳೆತನದ ನಿಷ್ಠೆಯಿಂದ ಕೂಡಿದ ರಾಯಬಾರವಾಗಿ ಕಾಣಿಸುತ್ತದೆ.

ನಾಗಚಂದ್ರನ 'ಪಂಪರಾಮಾಯಣ'ದಲ್ಲಿಯೂ ರಾವಣನು ತನ್ನ ತಂಗಿ ಚಂದ್ರನಖಿಗೆ ಆಗಿರುವ ಅನ್ಯಾಯಕ್ಕೆ ಪ್ರತಿಕಾರ ತೀರಿಸಿಕೊಳ್ಳುವ ಸಲುವಾಗಿ ಬರುವಾಗ ರಾಮನ ಜೊತೆಯಲ್ಲಿ ಕುಳಿತಿದ್ದ ಸೀತೆಯ ರೂಪವನ್ನು ನೋಡಿ ಮೋಹಗೊಳ್ಳುವುದು ಕೂಡ ಪ್ರೇಮದ ಮುಸುಕಿನೊಳಗಿನ ಕಾಮವೆಂದೇ ಭಾವಿಸಬೇಕು. ಕಾಮಾತುರದಲ್ಲಿ ಸೀತೆಯನ್ನು ಹೊತ್ತೊಯ್ಯಲು, 'ಇವರಾರ್, ಈಕೆಯನ್ ಈತನಿಂದಗಲ್ಚುವ ಉಪಾಯವಾವುದೆನೆ' (ಪಂ.ರಾ.ಸಂ. ಪುಟ ೪೨) ಎಂದು

ಅವನು ಸಹಾಯ ಬೇಡಿದ್ದು ತನ್ನೊಳಗಿನ ಅವಲೋಕಿನಿ ಎಂಬ ವಿದ್ಯೆಯನ್ನು. ಅಂದರೆ ತನ್ನ ಕಾಮಕ್ಕೆ ಬೆಂಬಲ ಪಡೆಯಲು ವಿದ್ಯೆಯನ್ನು ಅವಲಂಬಿಸಿದ್ದು ಕೂಡ ಒಂದು ರೀತಿಯಲ್ಲಿ ರಾಯಬಾರದ ನೆಲೆಯಲ್ಲಿ ಗುರುತಿಸಬಹುದು. ಸೀತೆಯನ್ನು ಲಂಕೆಗೆ ಹೊತ್ತೊಯ್ದರೂ ಆ ಪ್ರೇಮ-ಕಾಮ ನಿವೇದನೆಗೆ ತನ್ನ ಹೆಂಡತಿಯಾದ ಮಂಡೋದರಿಯನ್ನು ಬಳಸಿಕೊಂಡದ್ದನ್ನೂ ಗಮನಿಸಬೇಕು.

ಅಂತೆಯೆ ಇದೇ ಪಂಪರಾಮಾಯಣದಲ್ಲಿ ನಳಕೂಬರನ ಹೆಂಡತಿಯಾದ ಉಪರಂಭೆಯು ರಾವಣನ ಗುಣ ಪ್ರಖ್ಯಾತಿ ಮತ್ತು ಸೌಂದರ್ಯಕ್ಕೆ ಮನಸೋತು ಅವನ ಮೇಲೆ ಉಂಟಾಗಿರುವ ಪ್ರೇಮಪೂರಿತ ಕಾಮವನ್ನು ಪ್ರಕಟಪಡಿಸುವುದಕ್ಕಾಗಿ ಆಕೆ ಆಶ್ರಯಿಸವುದು ತನ್ನ ಆಸ್ಥಾನದ ದೂದವಿಯನ್ನು. ಆ ದೂದವಿಯ ಬಳಿ ತನ್ನ ಮನದ ಹಂಬಲವನ್ನು ತಿಳಿಸಿ ರಾವಣನ ಬಳಿಗೆ ರಾಯಬಾರ ಮಾಡುವಂತೆ ಕೋರುತ್ತಾಳೆ. ಅದರಂತೆ ದೂದವಿಯೂ ಕೂಡ ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ರಾವಣನ ಬಳಿಗೆ ಹೋಗಿ ಉಪರಂಭೆಯು ರಾವಣನ ಮೇಲೆ ಹೊಂದಿರುವ ಮೋಹದ ಬಗೆಗೆ ನಿವೇದಿಸುತ್ತಾಳೆ. ಹೀಗೆ ನಿವೇದಿಸುವುದು ಈ ಇಬ್ಬರ ನಡುವೆ ಏರ್ಪಡಬಹುದಾದ ಕಾಮ ಸಂಬಂಧಕ್ಕೆ ಎಂಬುದನ್ನು ಗಮನಿಸಿದರೆ ದೂದವಿಯೂ ಕೂಡ ರಾವಣ ಮತ್ತು ಉಪರಂಭೆಯ ನಡುವೆ ಪ್ರೇಮ-ಕಾಮ ವ್ಯವಹಾರಕ್ಕೆ ರಾಯಬಾರ ವಹಿಸಿದ್ದಾಳೆಂದು ಅರ್ಥ. ನಿಜ ಸಂಗತಿಯೆಂದರೆ ರಾವಣನು 'ಪರಾಂಗನಾ ವಿರತಿ' ಎಂಬ ವ್ರತವನ್ನು ಕೈಗೊಂಡಿದ್ದ ಕಾರಣ ದೂದವಿಯ ರಾಯಬಾರ ಇಲ್ಲಿ ಯಶಸ್ವಿಗೊಳ್ಳುವುದಿಲ್ಲ. ಯಶಸ್ವಿಗೊಳ್ಳುವುದು ಬಿಡುವುದು ಬೇರೆ ಮಾತು. ಆದರೆ ಅಂಥದ್ದೊಂದು ಸಂಬಂಧಕ್ಕೆ ರಾಯಬಾರತ್ವವನ್ನು ವಹಿಸಿದ ಉದಾಹರಣೆಯಂತೂ ಇಲ್ಲಿ ಕಂಡುಬರುತ್ತದೆ.

ಜನ್ನನ 'ಯಶೋಧರ ಚರಿತೆ'ಯಲ್ಲಿ ಅಮೃತಮತಿಯು ತನ್ನ ಗಂಡ ಯಶೋಧರನೊಂದಿಗೆ ಮಲಗಿರುವಾಗ, ಆ ಆಸ್ಥಾನದ ಕೀಳು-ಸೇವಕನಾದ ಅಷ್ಟಾವಂಕನು, 'ಬಿನದಕೆ ಪಾಡುತಿರೆ ನುಣ್ಣನಿ' (ಯ.ಚ. ಎರಡನೆ ಅವತಾರ, ಪದ್ಯ ೨೮, ಪುಟ ೧೬) ಇಂಪಾಗಿ ಕೇಳಿಬಂದ ಹಾಡಿಗೆ ಮನಸೋತು ಹಾಡಿದವನಿಗೆ 'ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್' (ಯ.ಚ. ಎರಡನೆ ಅವತಾರ, ಪದ್ಯ ೨೮, ಪುಟ ೧೬) ತನ್ನ ಮನಸ್ಸನ್ನು ಉಡುಗೊರೆಯನ್ನಾಗಿ ಕೊಡುತ್ತಾಳೆ. ಹೀಗೆ ಮನಸ್ಸನ್ನು ಕೊಟ್ಟರೂ ಆ ಉಡುಗೊರೆಯ ಹಿಂದಿನ ಉದ್ದೇಶ ಮಾತ್ರ ಕಾಮ ಸಂಬಂಧವನ್ನು ಏರ್ಪಡಿಸಿಕೊಳ್ಳುವುದಾಗಿಯೇ ಕಾಣಿಸುತ್ತದೆ. ಆ ಕಾಮಸಂಬಂಧವು ಏರ್ಪಡುವುದು ಅಮೃತಮತಿಯ ಆಪ್ತ ಸೇವಕಿಯೂ ಗೆಳತಿಯೂ ಆದ ದೂದವಿಯ ರಾಯಬಾರದಿಂದ.

ಅಮೃತಮತಿಯು 'ಮನದನ್ನಳಪ್ಪ ಕೆಳದಿಗೆ ಮನಮಂ ಮುಂದಿಟ್ಟು ಬಳಿಕ ಕಳಿಪಿದೊಡೆ' (ಯ.ಚ. ಎರಡನೆ ಅವತಾರ, ಪದ್ಯ ೩೩, ಪುಟ ೧೬) ರಾಯಬಾರಕ್ಕಾಗಿ ದೂದವಿಯನ್ನು ಕಳಿಸಿದಾಗ ಆ ದೂದವಿಯು ಆ ಕೀಳು-ಸೇವಕನನ್ನು ನೋಡಿ, ಇಂಥ ಕುರೂಪನಾದ ವ್ಯಕ್ತಿಯೊಂದಿಗೆ ತನ್ನ ಗೆಳತಿಯ ಅಥವಾ ರಾಣಿಯ ಪ್ರೇಮ-ಕಾಮ ವ್ಯವಹಾರ ನಡೆಯಬಾರದೆಂದು ಅವನಲ್ಲಿ ಇಲ್ಲದ ಅನೇಕ ಕುರೂಪತೆಗಳನ್ನು ಕಲ್ಪಿಸಿ ಹೇಳುತ್ತಾಳೆ. ಇಲ್ಲಿ ಗೆಳತಿಯು ತಾನು ರಾಯಬಾರ ವಹಿಸುತ್ತಿರುವಂತೆ ನಡೆದುಕೊಳ್ಳುತ್ತಿದ್ದರೂ ಇಂಥದ್ದೊಂದು ಅನೈತಿಕ ಸಂಬಂಧವು ಏರ್ಪಡದಿರಲಿ ಎಂಬ ಆಶಯವೂ ಆಕೆಯಲ್ಲಿತ್ತು ಎಂಬುದು ಆಕೆ ವರ್ಣಿಸಿದ ಕುರೂಪ ವರ್ಣನೆಯಲ್ಲಿ ಮತ್ತು ಆಡಿದ ವ್ಯಂಗ್ಯದ ಮಾತುಗಳಿಂದ ಗೊತ್ತಾಗುತ್ತದೆ. ಆದರೆ ದೂದವಿಯು ಅಮೃತಮತಿಗೆ ಗೆಳತಿಯಾಗಿದ್ದರೂ ರಾಣಿಯ ಆಸ್ಥಾನದಲ್ಲಿ ತಾನೊಬ್ಬ ಸೇವಕಿ ಎಂಬ ಪ್ರಜ್ಞೆಯೂ ಆಕೆಯಲ್ಲಿತ್ತು. ಹಾಗಾಗಿ ರಾಣಿಯ ಆದೇಶವನ್ನು ಪಾಲಿಸಬೇಕಾದ ಅನಿವಾರ್ಯತೆ ಎದುರಾದಾಗ ಗೆಳತಿಯಾಗಿ ಅದರಿಂದ ಹೊರತರಲು ಪ್ರಯತ್ನಿಸುತ್ತಾಳೆ. '...ಆಕೆಗೆ ಲಂಚಮನಿತ್ತು ಎಂದುದನೆರವಿಗೊಂಡು' (ಯ.ಚ. ಎರಡನೆ ಅವತಾರ, ಪದ್ಯ ೪೪, ಪುಟ ೧೮) ಆದರೆ ಸೇವಕಿಯಾಗಿ ರಾಣಿ ತೋರಿಸಿದ ಲಂಚವೆಂಬ ಆಮಿಷದಿಂದ ಆ ಅನೈತಿಕ ಸಂಬಂಧ ಏರ್ಪಡಲು ಕಾರಣ ಕರ್ತಳಾಗುತ್ತಾಳೆ. ಈ ಸಂಬಂಧ ಏರ್ಪಡಲು ಲಂಚ ಕಾರಣವಾದರೂ ಅದರೊಟ್ಟಿಗೆ ಅಮೃತಮತಿಯ ತೀವ್ರಕಾಮದ

ಬಯಕೆಯೂ ಬಹಳ ಮುಖ್ಯ. ಏಕೆಂದರೆ ದೂದವಿಯ ವರ್ಣಿಸಿದ ಕುರೂಪದ ವರ್ಣನೆ ಕೇಳಿದ್ದಾಗ್ಯೂ 'ಒಲವಾದೊಡೆ ರೂಪಿನ ಕೋಟಲೆಯೇವುದೊ, ಕಾರ್ಯಮಾಗೆ ಕಾರಣದಿಂದ ಫಲಮೇನೊ' (ಪದ್ಯ ೪೩, ಪುಟ ೧೮) ಎಂದು ಸಮರ್ಥಿಸಿಕೊಳ್ಳುವ ಮತ್ತು ಮುಂದುವರೆದು 'ಇಂದೆನಗಾತನೆ ಕಾಮದೇವಂ ಇಂದ್ರಂ ಚಂದ್ರಂ' ಎಂಬ ಮಾತುಗಳಲ್ಲಿ ಆಕೆಯ ತೀವ್ರಕಾಮದ ಬಯಕೆ ವ್ಯಕ್ತವಾಗುತ್ತದೆ. ಈ ರೀತಿಯ ತೀವ್ರಕಾಮದ ಬಯಕೆಯಲ್ಲಿದ್ದ ಅಮೃತಮತಿಯನ್ನು ಅಷ್ಟಾವಂಕನ ಜೊತೆ ಕೂಡಿಸಿ, ಅವರಿಬ್ಬರ ನಡುವೆ ಇಂಥದ್ದೊಂದು ಕಾಮ ಸಂಬಂಧ ಏರ್ಪಡಿಸುವಲ್ಲಿ ಈ ದೂದವಿಯ ರಾಯಬಾರದ ಕಾರ್ಯ ತುಂಬ ಮಹತ್ವದ್ದಾಗಿ ಕಾಣಿಸುತ್ತದೆ..

ಹಾಗೆಯೆ ಹರಿಹರನ 'ಮಲುಹಣನ ರಗಳೆ'ಯಲ್ಲಿ ಮಲುಹಣ ಮತ್ತು ಮಲುಹಣಿಯರ ನಡುವಿನ ಪ್ರೇಮಕ್ಕೆ ರಾಯಬಾರದಂತೆ ಮಲುಹಣಿಯ ತಾಯಿಯಾದ ಪದ್ಮಾವತಿಯು ಕೆಲಸ ಮಾಡುವುದನ್ನು ಗಮನಿಸಬಹುದು. ಅಂತೆಯೆ ಕನಕದಾಸರ 'ನಳಚರಿತ್ರೆ'ಯಲ್ಲಿ ನಳ ಮತ್ತು ದಮಯಂತಿಯರ ನಡುವಿನ ಪ್ರೇಮಕ್ಕೆ ಹಂಸಪಕ್ಷಿಯೊಂದು ರಾಯಬಾರ ವಹಿಸಿದ್ದನ್ನೂ ಗಮನಿಸಬಹುದು. ಇಲ್ಲಿ ಹಂಸಪಕ್ಷಿಯ ರಾಯಬಾರವು ಪ್ರೇಮಿಗಳಿಬ್ಬರ ಪ್ರೇಮಪತ್ರಗಳ ವಿನಿಮಯಕ್ಕೆ ಅಂಚೆವ್ಯವಸ್ಥೆಯಂತೂ ಬಳಕೆಯಾಗಿರುವುದನ್ನು ಗಮನಿಸಬೇಕು. ಹಾಗಾಗಿ ಈ ನಳ ದಮಯಂತಿಯರ ಪ್ರೇಮ ಸಾಫಲ್ಯಕ್ಕೆ ಹಂಸ ಪಕ್ಷಿಯ ರಾಯಬಾರವೂ ಮುಖ್ಯವೆಂದು ಭಾವಿಸಬೇಕಾಗುತ್ತದೆ. ಇಲ್ಲಿ ಪದ್ಮಾವತಿಯದ ಸ್ವಾರ್ಥ ರಾಯಬಾರವಾದರೆ, ಹಂಸ ಪಕ್ಷಿಯದು ನಿಸ್ವಾರ್ಥ ರಾಯಬಾರವಾಗಿ ಕಾಣಿಸುತ್ತದೆ. ಮಲುಹಣನ ರಗಳೆ ಮತ್ತು ನಳಚರಿತ್ರೆ ಇವು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಕಾರಣ ಇವುಗಳ ಹೆಚ್ಚಿನ ವಿವರಗಳನ್ನು ಇಲ್ಲಿ ಕೊಡತ್ತಿಲ್ಲ.

ಇಲ್ಲಿ ಚರ್ಚಿಸಿರುವ ಪ್ರೇಮವು ಆಲೋಚನಾ ಶಕ್ತಿಯಿಂದ ಮತ್ತು ವಿವೇಕ ಪ್ರಜ್ಞೆಯಿಂದ ನಡೆಯುವುದಾದರೆ, ಕಾಮವು ವಿವೇಕ ಪ್ರಜ್ಞೆ ಮತ್ತು ಆಲೋಚನಾ ಶಕ್ತಿಯನ್ನು ಕಳೆದುಕೊಂಡು ಜರುಗುವ ಪ್ರಕ್ರಿಯೆಯಾಗಿ ಕಂಡುಬರುತ್ತದೆ. ಹಾಗೆಯೆ ಇಲ್ಲಿ 'ದುರ್ಬಲಸ್ಯ ಬಲೊ ರಾಜಾಃ' ಎಂಬಂತೆ ಪ್ರಭುತ್ವದ ಅಧಿಕಾರದ ಬಲದಲ್ಲಿ ನಲುಗಿದ ಅಸಹಾಯಕತೆಯ ರಾಯಬಾರವು ವಡ್ಡಾರಾಧನೆ ಕತೆಗಳಲ್ಲಿ ಕಂಡುಬಂದರೆ, ಪಂಪಭಾರತದಲ್ಲಿನ ಭೀಷ್ಮನ ರಾಯಬಾರವು ತನ್ನ ತಂದೆಯ ಪ್ರಾಣ ಹೋದರೆ ಅದರ ಪಾಪ ತನಗೆ ತಟ್ಟುತ್ತದೆಂಬ ಸ್ವಾರ್ಥದಿಂದ ಕೂಡಿದುದು ಮತ್ತು ತ್ಯಾಗವನ್ನು ಬಯಸಿದ ರಾಯಬಾರವಾಗಿ ಕಾಣಿಸುತ್ತದೆ. ಅದರಂತೆ ನಾಗವರ್ಮನ ಕರ್ನಾಟಕ ಕಾದಂಬರಿಯಲ್ಲಿನ ಕಪಿಂಜಲನ ರಾಯಬಾರವು ಸಂಪೂರ್ಣ ಕಾಳಜಿಯಿಂದ ಕೂಡಿದ ನಿಷ್ಠಾವಂತ ಗೆಳೆಯನ ಪ್ರಾಮಾಣಿಕ ರಾಯಬಾರವಾಗಿ ಕಾಣಿಸುತ್ತದೆ, ನಾಗಚಂದ್ರನ ಪಂಪರಾಮಾಯಣದಲ್ಲಿನ ದೂದವಿಯದು ಕರ್ತವ್ಯ ಪಾಲನಾ ರಾಯಬಾರವಾಗಿ, ಅದರಂತೆ ರಾವಣನು ಸೀತೆಯನ್ನು ಹೊತ್ತೊಯ್ಯುವ ಮೊದಲು ಅವಲೋಕಿನಿ ವಿದ್ಯೆಯು ರಾವಣನಿಗೆ ಬುದ್ಧಿಮಾತನ್ನು ಹೇಳುವಲ್ಲಿ ಒಂದು ಬಗೆಯ ಕಾಳಜಿ, ಹೊಣೆಗಾರಿಕೆ ಮತ್ತು ರಾವಣನು ಇದುವರೆಗೂ ಸಂಪಾದಿಸಿದ್ದ ಗುಣಪ್ರಖ್ಯಾತಿಗೆ ಹಾನಿಯಾಗದಂತೆ ತಡೆಯುವ ರಾಯಬಾರವಾದರೂ, ಕಡೆಗೆ ಅಧೀನತೆಗೆ ತಲೆಬಾಗುವ ರಾಯಬಾರವಾದುದನ್ನು ಗಮನಿಸಬೇಕು. ಇನ್ನು ಕಡೆಯಲ್ಲಿ ಯಶೋಧರ ಚರಿತೆಯಲ್ಲಿ ಕಂಡುಬರುವ ದೂದವಿಯ ರಾಯಬಾರವೂ ಕೂಡ ತನ್ನ ರಾಣಿಯ ಅನೈತಿಕ ಸಂಬಂಧವನ್ನು ತಡೆಯುವ ನೆಲೆಯಲ್ಲಿ ಕಂಡುಬಂದರೂ ಮುಂದೆ ಅದು ಸ್ವಾರ್ಥ ಮತ್ತು ಆಮಿಷಕ್ಕೆ ಬಲಿಯಾದ ರಾಯಬಾರವಾಗಿ ಕಾಣಿಸುತ್ತದೆ. ಹೀಗೆ ರಾಯಬಾರಗಳ ಹಿಂದೆ ಅವುಗಳದ್ದೇ ಆದ ಕಾರಣಗಳಿರುವುದನ್ನು ಗಮನಿಸಬಹುದು.

ಹೀಗೆ ನಡೆದಿರುವ ರಾಯಬಾರಗಳೆಲ್ಲವೂ ಯಶಸ್ವಿಯಾಗಿವೆ ಎಂದಾಗಲಿ ಅಥವಾ ಅಪಯಶಗೊಂಡವು ಎಂದಾಗಲಿ ಹೇಳಲಾಗುವುದಿಲ್ಲ. ಕೆಲವೊಂದು ಯಶಸ್ಸನ್ನು ಕಂಡರೆ ಕೆಲವೊಂದು ರಾಯಬಾರಗಳು ಎಷ್ಟೇ ನಿಷ್ಠೆ ಪ್ರಾಮಾಣಿಕತೆಯಿಂದ ನಡೆದಿದ್ದರೂ ಅವುಗಳದ್ದೇ ಆದ ಕೆಲವು ಕಾರಣಗಳಿಂದ ವಿಫಲಗೊಂಡಿರುವುದೂ ನಡೆದಿದೆ. ಉದಾಹರಣೆಗೆ ರಾವಣನನ್ನು ಮೋಹಿಸಿದ ಉಪರಂಭೆಯು ತಾನು ಕಳಿಸಿದ ರಾಯಬಾರವು ರಾವಣನ ಪರಾಂಗನಾ ವಿರತಿ ವ್ರತದಿಂದ

ವಿಫಲಗೊಳ್ಳುತ್ತದೆ. ಅಂತೆಯೆ ಕಪಿಂಜಲನು ತನ್ನ ಗೆಳೆಯನ ಪ್ರೇಮಕ್ಕೆ ರಾಯಬಾರವನ್ನು ಬಹಳ ಮುತುವರ್ಜಿಯಿಂದ ನಡೆಸಿದರೂ, ಮಹಾಶ್ವೇತೆಯಲ್ಲಿ ಪ್ರೇಮವಿದ್ದಾಗ್ಯೂ ಪುಂಡರೀಕನ ಮರಣದಿಂದ ಅದೂ ಕೂಡ ಯಶಸ್ವಿಯಾಗುವುದಿಲ್ಲ.

ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರೇಮ-ಕಾಮ ಸಂಬAಧಕ್ಕೆ ರಾಯಬಾರಗಳು ನಡೆದಿರುವುದನ್ನು ಗಮನಿಸಿದರೆ ಇಂಥ ಮಧ್ಯಸ್ಥಿಕೆ ಅಥವಾ ರಾಯಬಾರಗಳಿಂದ ಪ್ರೇಮವನ್ನಾಗಲಿ ಅಥವಾ ಕಾಮವನ್ನಾಗಲಿ ಸಫಲಗೊಳಿಸಿಕೊಳ್ಳಬಹುದು ಇಲ್ಲವೆ ಅದು ಸಫಲಗೊಳ್ಳುತ್ತದೊ ಇಲ್ಲವೊ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಅರಿಯಬಹುದು. ಹಾಗಾಗಿ ಪ್ರೇಮ-ಕಾಮ ಸಂಬಂಧದಲ್ಲಿ ರಾಯಬಾರವನ್ನು ಅತ್ಯಂತ ಪ್ರಮುಖ ಸೇತುವೆಂದು ಭಾವಿಸಲು ಯಾವುದೇ ಅಡ್ಡಿಯಿಲ್ಲ.

---

ಆಧಾರ ಗ್ರಂಥಗಳು

೧.ವಡ್ಡಾರಾಧನೆ - ಶಿವಕೋಟ್ಯಾಚಾರ್ಯ, ಸಂ. ಕಮಲಾ ಹಂಪನಾ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨.ಪಂಪಭಾರತಂ - ಪಂಪ, ಗದ್ಯಾನುವಾದ, ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಬೆಂಗಳೂರು, ೨೦೧೩

೩.ಕರ್ನಾಟಕ ಕಾದಂಬರಿ ಸಂಗ್ರಹ - ನಾಗವರ್ಮ, ಸಂ. ಟಿ.ಎಸ್. ವೆಂಕಣ್ಣಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೫

೪.ರಾಮಚಂದ್ರ ಚರಿತ ಪುರಾಣಂ - ನಾಗಚಂದ್ರ, ಸಂ. ಡಾ. ಶಾಂತಿನಾಥ ದಿಬ್ಬದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫.ಯಶೋಧರ ಚರಿತೆ - ಜನ್ನ, ಸಂ. ಜಿ.ಎಸ್. ಸಿದ್ದಲಿಂಗಯ್ಯ, ಸಾಹಿತ್ಯ ಅಕಾದೆಮಿ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು, ೨೦೦೯

೬.ಲೀಲಾವತಿ ಪ್ರಬಂಧಂ - ನೇಮಿಚಂದ್ರ, ಸಂ. ದೇ. ಆವರೇಗೌಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೭.ಹರಿಹರನ ರಗಳೆಗಳು - ಸಂ. ಎಂ.ಎಂ. ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, ೨೦೧೧

೮.ನಳಚರಿತ್ರೆ - ಕನಕದಾಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, ೨೦೧೧.